# ಪ್ರೇರಣೆ

## (ರಾಮಲಕ್ಷಣರಿಗೆ ವಿಶ್ವಾಮಿತ್ರರಿಂದ ನೀತಿಯ ಶಿಕ್ಷಣ)


**ಸುರೇಶ್ ಕುಮಾರ್**

ರಾಮಾಯಣದ ಬಾಲಕಾಂಡದಲ್ಲಿ ಬರುವ ವಿಶ್ವಾಮಿತ್ರರ ಬೋಧಕ ವ್ಯಕ್ತಿತ್ವದ ಬಗ್ಗೆ ಬೆಳಕು ಚೆಲ್ಲುವ ಹಲವು ಘಟನೆಗಳನ್ನು ಆಧರಿಸಿ ಕೆಲವು ಕಥೆಗಳನ್ನಿಲ್ಲಿ ನಿರೂಪಿಸಲಾಗಿದೆ. ಸಮಾಜಕ್ಕೆ ಅತ್ಯಗತ್ಯವಾದ ನೈತಿಕ, ಮೌಲಿಕ, ಆಧ್ಯಾತ್ಮಿಕ ಆದರ್ಶಗಳನ್ನು ನಿರೂಪಿಸುವ, ಇಂದಿಗೂ ಪ್ರಸ್ತುತವಾದ ರಾಮಾಯಣದ ಅಪೂರ್ವ ಚಿಂತನೆಗಳು ಇಲ್ಲಿವೆ.  ಲೇಖಕರು ಆಧ್ಯಾತ್ಮಿಕ ಬರಹಗಾರರು ಹಾಗೂ ಭಾಷಣಕಾರರು. ಸಮಾಜ ಸೇವಾರ್ಕರ್ತರೂ ಆಗಿರುವ ಅವರು ಬೆಂಗಳೂರು ನಿವಾಸಿಗಳು.

### ಉದಯರಾಗ

ಸರಯೂ ನದಿಯ ಪೂರ್ವದಿಗಂತದಲ್ಲಿ ಸುಪ್ರಭಾತದ ಅರುಣವರ್ಣ ಮೂಡತೊಡಗಿತು. ವಿಶ್ವಾಮಿತ್ರರು ರಾಮನನ್ನು ಎಚ್ಚರಿಸಲು ಉದ್ಯುಕ್ತರಾದರು. ''ಕೌಸಲ್ಯಾ ಸುಪ್ರಜಾ ...'' – 'ಕೌಸಲ್ಯೆಯ ಸುಪುತ್ರನಾದ ರಾಮನೇ, ಏಳು, ಮೇಲೇಳು. ನಿನ್ನನ್ನು ಹೆತ್ತಿರುವ ಕೌಸಲ್ಯೆ ಪರಮ ಭಾಗ್ಯಶಾಲಿನಿ. ಹೇ ನರ ಸಿಂಹ, ಬೆಳಗಾಗುತ್ತಿದೆ ಏಳು. ಸಂಧ್ಯಾವಂದನಾದಿ ದೈವ ಕಾರ್ಯವನ್ನೂ, ನಿತ್ಯಕರ್ಮಗಳನ್ನೂ ಮಾಡಬೇಕು'' ಎಂದರು. ಮಕ್ಕಳನ್ನು ಹೇಗೆ ಮಲಗಿಸಬೇಕು ಹಾಗೂ ಹೇಗೆ ಎಬ್ಬಿಸಬೇಕೆಂಬುದು ಇಲ್ಲಿ ಬಿಂಬಿತವಾಗಿದೆ. ರಾಮ, ಲಕ್ಷ್ಮಣರಿಗೆ ಆಗ ವಯಸ್ಸು ಹದಿನೈದು. ರಾತ್ರಿ ಮಲಗುವ ಮೊದಲು ಯಾವ ಕಾರ್ಯದಲ್ಲಿ ತೊಡಗಿದ್ದರು? ಹಿರಿಯರ ಸೇವೆಯು ಅವರ ಮನದ ಮೇಲೆ ಸತ್ಪರಿಣಾಮ ಬೀರುವುದು. ಮಲಗುವಾಗ ಮತ್ತು ಏಳುವಾಗ ಪರಮಾತ್ಮನ ಸ್ಮರಣೆಯು ಪಾವನಕರವಾದುದು. ತಮ್ಮ ಬಾಳಿಗೆ ಬೆಳಕಾಗಿರುವ ಗುರು, ಹಿರಿಯರ ಸೇವೆಯಿಂದ ದಿನದ ಮುಕ್ತಾಯವಾಗಬೇಕು. ಮಕ್ಕಳಿಗೆ ಬೆಳಕಾಗುವಂತೆ ಹಿರಿಯರ ನಡವಳಿಕೆಯೂ ಇರಬೇಕಾದದ್ದು ಗಮನಾರ್ಹವಾದುದು. ಮಲಗುವ ಕ್ಷಣಗಳ ಇಂದಿನ ವಾತಾವರಣ ಹೇಗಿದೆ?  ಮಲಗುವಾಗ ಸದ್ವಿಚಾರಗಳ ಚಿಂತನೆಯಿರಬೇಕು. ಮನೋಬೋಧಕ ಕಥೆಗಳ ಶ್ರವಣದೊಡನೆ ನಿದ್ದೆ ಬರಬೇಕು. ಎಬ್ಬಿಸುವಾಗಲೂ ಇಂತಹುದೇ ವಾತಾವರಣವಿರಬೇಕು. ದೇವ ಕಾರ್ಯದೊಂದಿಗೆ ನಮ್ಮ ಕರ್ತವ್ಯವನ್ನು ಪ್ರಾರಂಭಿಸಬೇಕು. ಸದ್ವಿಚಾರದಿಂದ ದಿನದ ಮುಕ್ತಾಯವಾಗಬೇಕು. ಹೀಗಾದಾಗ ದೇವರ ಕಾರ್ಯ ಮತ್ತು ನಮ್ಮ ಕರ್ತವ್ಯ ಎರಡೂ ಒಂದೇ ಆಗುವುದು. ಉತ್ಥಾನ ಹಾಗೂ ಪ್ರಾರಂಭದ ಕೆಲಸವು ಇಡೀ ದಿನದ ನಮ್ಮೆಲ್ಲ ಚಟುವಟಿಕೆಗಳಿಗೆ ಅಡಿಪಾಯದಂತಿರುವುದು.

ಪ್ರಸನ್ನ ಚಿತ್ತದಿಂದ ಸುಮಧುರವಾಗಿದ್ದ ಮಹರ್ಷಿಗಳ ಮಾತು ಮಕ್ಕಳ ಕಿವಿಗಳಲ್ಲಿ ಹಕ್ಕಿಗಳು ಉಲಿದಂತಾಯಿತು. ಮಲಗುವಾಗ ಇದ್ದ ಪುಣ್ಯಭಾವದೊಡನೆಯೇ ಎದ್ದರು. ದಿನದ ಕರ್ತವ್ಯದ ಆರಂಭಕ್ಕೆ ಅಣಿಯಾದರು. ಕರ್ತವ್ಯವನ್ನು ನೆನಪಿಸುವುದರಲ್ಲಿ, ಕಲಿಸುವುದರಲ್ಲಿ ಯಾರಾದರೂ ಸರಿಯೇ ಸಡಿಲಿಕೆ



ಸಲ್ಲದು. ಪೂಜೆ, ಪ್ರಾರ್ಥನೆ, ಸೂರ್ಯನಮಸ್ಕಾರಗಳನ್ನು ಮಾಡಿದರು. ಗುರುಗಳಿಗೆ ವಂದಿಸಿ ಸಿದ್ಧರಾದರು. ಪಯಣಿಸುವಾಗ ಋಷಿಮುನಿಗಳು ತಪಸ್ಸನ್ನಾಚರಿಸುತ್ತಿದ್ದ ಪುಣ್ಯಾಶ್ರಮವೊದನ್ನು ಕಂಡು ಪುಳಕಿತರಾದರು.

### ಕಾಮನನ್ನು ಸುಟ್ಟ ಕಥೆ

ರಾಮನು ಜ್ಞಾನಕುಂಭ ತುಂಬಿಕೊಳ್ಳುವ ಕುತೂಹಲದಿಂದ, ''ಮಹರ್ಷಿಗಳೇ, ಈ ಪುಣ್ಯಾಶ್ರಮದ ತಾಣ ಯಾರಿಗೆ ಸೇರಿದ್ದು? ಇಲ್ಲಿ ವಾಸ ಮಾಡುವವರು ಯಾರು? ನಮಗೆ ಇದನ್ನು ಅರಿಯುವ ಕುತೂಹಲವಾಗಿದೆ''ಎಂದನು. ಮುಗುಳ್ನಕ್ಕ ಮುನಿವರ್ಯರು ಮನೋಬೋಧಕ ಕಥೆ ಹೇಳಿದರು. ''ರಾಮ, ಈ ಸ್ಥಾನದಲ್ಲಿ ಹಿಂದೆ ಕಾಮನು ಸಶರೀರನಾಗಿದ್ದನು. ಈಶ್ವರನು ಹಿಂದೊಮ್ಮೆ ಇಲ್ಲಿ ನಿಯಮಶೀಲನಾಗಿ ತಪಸ್ಸಿನಲ್ಲಿದ್ದನು. ಅವನು ಕಾಮವಿಕಾರ ಮಾಡಲು ಈಶ್ವರನನ್ನೇ ಕೆಣಕಿದನು. ಪರಮೇಶ್ವರನು ಅತಿ ಕ್ರುದ್ಧನಾದನು. ಹುಂಕಾರದಿಂದಲೇ ಕೆಂಗಣ್ಣನ್ನು ತೆರೆದು ಕಾಮನನ್ನು ನೋಡಿದನು. ಅವನ ಅಂಗಗಳೆಲ್ಲವೂ ಸುಟ್ಟು ಬೂದಿಯಾದವು. ಈಶ್ವರನ ಕೋಪದಿಂದ ಶರೀರ ಕಳೆದುಕೊಂಡ ಕಾಮನಿಗೆ ಅನಂಗನೆಂದು ಹೆಸರಾಯಿತು. ಕಾಮ ಅಂಗ(ಶರೀರ)ವನ್ನು ಕಳೆದುಕೊಂಡದ್ದರಿಂದ ಸ್ಮರಣಾರ್ಥವಾಗಿ ಈ ಪ್ರದೇಶಕ್ಕೆ 'ಅಂಗ' ದೇಶವೆಂದು ಹೆಸರಾಯಿತು. ರಾಮ, ಇದು ಪುಣ್ಯಾಶ್ರಮದ ಚರಿತೆ. ಇದನ್ನು ಕಾಮಾಶ್ರಮವೆಂದೂ

ಕರೆಯುವರು. ಪುಣ್ಯಾತ್ಮರಾದ ಋಷಿಗಳು ಇಲ್ಲಿ ಧರ್ಮನಿಷ್ಠರಾಗಿ ತಪಸ್ಸಿನಲ್ಲಿದ್ದಾರೆ. ಪವಿತ್ರ ನದಿಯ ದಡದಲ್ಲಿರುವ ಈ ಮಂಗಳಾಶ್ರಮದಲ್ಲಿಯೇ ಇಂದು ಉಳಿದುಕೊಳ್ಳೋಣ'' ಎಂದು ಶುಚಿರ್ಭೂತರಾಗಿ ಆಶ್ರಮವನ್ನು ಪ್ರವೇಶಿಸಿದರು. ಸಂಧ್ಯಾ, ಜಪಾದಿಗಳನ್ನು ಮುಗಿಸಿದರು. ಆ ಬೋಧಕ ಕಥೆಯ ನೆನಪಿನೊಂದಿಗೆ, ಮತ್ತೂ ಅನೇಕ ಮನೋಹರ ವಿಚಾರಗಳನ್ನು ಕೇಳುತ್ತ ಮಲಗಿದರು.

ಪ್ರಶ್ನೆ ಕೇಳುವುದು ಮಕ್ಕಳ ಸಹಜವಾದ ಹಕ್ಕು. ಅದಕ್ಕೆ ಸರಿಯಾಗಿ ಉತ್ತರಿಸುವುದು ಗುರುಗಳ ಮತ್ತು ಹಿರಿಯರ ಕರ್ತವ್ಯ. ಇದು ಕಿರಿಯ, ಹಿರಿಯರ ಸ್ವಭಾವವಾಗಿರಬೇಕು. ಕಿರಿಯರಿಗೆ ತಿಳಿಸಬೇಕಾದರೆ ಮೊದಲಿಗೆ ಹಿರಿಯರಿಗೆ ತಿಳಿದಿರಬೇಕು. ಇಲ್ಲಿ ಮಕ್ಕಳು ಕೇಳಿದಾಗ ವಿಶ್ವಾಮಿತ್ರರು ಸಿಡಿಮಿಡಿಯಿಲ್ಲದೆ ತಿಳಿನಗೆಯಿಂದ ತಿಳಿಸಿದ್ದಾರೆ. ಬುದ್ಧಿವಂತ ಸಾಧಕರಿಗೆ ಇದು ದೀವಟಿಗೆಯಂತಿದೆ. ಅತಿ ಕಾಮನೆಗಳು ಅರ್ಥಾತ್ ಬೇಕುಗಳು ವ್ಯಕ್ತಿತ್ವ ವಿಕಸನಕ್ಕೆ ವಿರೋಧವಾಗುವುದು. ಇವು ನಮ್ಮ ಮನದೊಳಗೆ ಅತಿಯಾಗಿ ಪ್ರವೇಶಿಸದಂತೆ ಎಚ್ಚರ ವಹಿಸಬೇಕು. 'ಕಾಮ' ಎನ್ನುವುದು ಯಾರನ್ನೂ ಬಿಡದು. ಶಿವನನ್ನೇ ಎದುರಿಸಿದೆಯೆಂದರೆ ಇನ್ನು ಸಾಮಾನ್ಯರ ಪಾಡೇನು? ಅದರ ಪ್ರಯತ್ನ ಭಯಂಕರವಾಗಿರುವುದು. ಶಿವನು ಕಾಮನ ರೂಪ ನಷ್ಟ ಮಾಡಿ ಮನುಕುಲಕ್ಕೆ ಮಹದುಪಕಾರ ಮಾಡಿದ್ದಾನೆ. ಆ ಕಾಮನ ರೂಪವಿಲ್ಲದೆಯೇ ಇಷ್ಟೊಂದು ಅಟ್ಟಹಾಸ ನಡೆದಿದೆ. ಇನ್ನು ರೂಪವಿದ್ದಿದ್ದರೆ? ಕಥೆಗೆ ಕಥೆಯಂತಿದೆ. ನೀತಿಗೆ ನೀತಿಯಾಗಿದೆ. ಆ ಪ್ರದೇಶದ ಇತಿಹಾಸ ಮತ್ತು ಭೂಮಿಯ ಪರಿಚಯ (ಭೂಗೋಳ) ಎರಡೂ ಇಲ್ಲಿದೆ. ಎಲ್ಲವೂ ಅನೌಪಚಾರಿಕವಾಗಿದೆ. ಸಣ್ಣ ಸಣ್ಣ ವಿಚಾರಗಳ ಬಗ್ಗೆಯೂ ಲಕ್ಷ್ಯವಿರಬೇಕು. ಸಾಧಕನ ಧ್ಯೇಯವು ಬರುವ ವಿಘ್ನವನ್ನು ಭಸ್ಮಮಾಡುವ ಶಿವಶಕ್ತಿಯ ಪ್ರಖರತೆ ಸೂಸುವಷ್ಟು ಪ್ರಖರವಾಗಿರಬೇಕು.

### ಸ್ವಚ್ಛತೆಯ ಪಾಠ

ಶುಚಿತ್ವದ ಬಗ್ಗೆ ನಮ್ಮಲ್ಲಿ ವಿಶೇಷ ಲಕ್ಷ್ಯ ಕೊಡುವರು. ಬಲಾತಿಬಲ ಬೋಧನೆಗೆ ಮೊದಲು, ಆಶ್ರಮಕ್ಕೆ ಹೋಗುವ ಮೊದಲು ಇದನ್ನು ನಾವು ನೋಡಬಹುದು. ಸ್ವಚ್ಛತೆಯು ಮನಸ್ಸಿನ ಶುದ್ಧತೆಯ ಮೊದಲ ಮೆಟ್ಟಿಲು. ಹೊರಗೆ ಎಲ್ಲೆಲ್ಲೋ ಸುತ್ತಾಡಿರುತ್ತೇವೆ. ಆ ಸಮಯದಲ್ಲಿ ಲೋಕದ ಕಸ ನಮ್ಮ ಮೈ-ಮನಕ್ಕೆ ಅಂಟಿಕೊಂಡಿರುತ್ತದೆ. ಇದನ್ನು ತೆಗೆಯಬೇಕು. ಮನಯೊಳಗೆ ಇದನ್ನು ಕೊಂಡೊಯ್ಯಬಾರದು. ಆದ್ದರಿಂದ ಪಾದರಕ್ಷೆ ಇತ್ಯಾದಿಗಳನ್ನು ಮನೆಯಿಂದ ಹೊರಗೆ ಬಿಡಬೇಕು. ಕೈ-ಕಾಲುಗಳನ್ನು ತೊಳೆಯಬೇಕು. ಕಸ ಹರಡುವುದರಿಂದ ಮನೋದಾರಿದ್ರ್ಯ ಬರುವುದು. ಕಸ-ಕೊಳೆಯ ಮಧ್ಯೆ ಇದ್ದಾಗ ಮನಸ್ಸು ಹೇಗೆ ಸ್ವಚ್ಛವಾಗಿರುವುದು? ಇದಕ್ಕಾಗಿ ನಾವು ಬಹಳ ಸಮಯ ಖರ್ಚು ಮಾಡಬೇಕಾಗಿಲ್ಲ. ಕೆಲವು ನಿಮಿಷ ಕೆಲಸ ಮಾಡಿದರೆ ದಿನವಿಡೀ ಮನೆ-ಮನ ಶಾಂತವಾಗಿರುವುದು.

ಮರುದಿನ ಪಯಣಿಸುವಾಗ ನದಿಯ ಮಧ್ಯಭಾಗಕ್ಕೆ ಬಂದರು. ಆಗ ಘೋರ್ಗರೆವ ಶಬ್ದ ಕೇಳಿಸಿತು. ಕುತೂಹಲಗೊಂಡ ರಾಮನು ವಿಶ್ವಾಮಿತ್ರರಲ್ಲಿ ''ಗುರುಗಳೆ, ಇದೇನು? ನೀರು ಪರಸ್ಪರ ಅಪ್ಪಳಿಸುವ ಶಬ್ದ? ಯಾವುದಿದು?'' ಎಂದು ಪ್ರಶ್ನಿಸಿದ.

ವಿಶ್ವಾಮಿತ್ರರು ''ರಾಮ, ಬ್ರಹ್ಮನು ಮಾನಸ ಸಂಕಲ್ಪದಿಂದ ಸರೋವರವೊಂದನ್ನು ಕೈಲಾಸ ಪರ್ವತದಲ್ಲಿ ಸೃಷ್ಟಿಸಿದ. ಅದೇ ಇಂದಿನ ಮಾನಸ ಸರೋವರ. ಅದರಿಂದಲೇ ಸರಯೂ ನದಿ ಹುಟ್ಟಿದೆ. ಪಾವನವಾಗಿರುವ ಅದರ ದಡದಲ್ಲಿಯೇ ನಿನ್ನ ಜನ್ಮಭೂಮಿ ಅಯೋಧ್ಯೆಯಿದೆ. ಮನು ಅಯೋಧ್ಯೆಯನ್ನು ನಿರ್ಮಿಸಲು ಆಯ್ಕೆ ಮಾಡಿದ್ದು ಈ ನದಿಯ ದಡವನ್ನೇ. ನಿಮ್ಮ ತಂದೆ ನಿನ್ನ ಜನ್ಮವಾಗಲು ಕಾರಣವಾದ ಅಶ್ವಮೇಧ, ಪುತ್ರಕಾಮೇಷ್ಟಿ ಯಾಗಗಳನ್ನು ಈ ನದಿಯ ದಡದಲ್ಲಿಯೇ ಮಾಡಿದನು. ಈ ನದಿಯ ನೀರಿನಿಂದಲೇ ಅಯೋಧ್ಯೆಯ ಸಂಸ್ಕೃತಿ-ನಾಗರಿಕತೆ ಅರಳಿದೆ. ಕೋಸಲ ರಾಜ್ಯವು ಸಸ್ಯಶ್ಯಾಮಲೆಯಾಗಿರುವುದು ಇದರ ನೀರಿನ ಫಲವತ್ತತೆಯಿಂದ. ನೀವು ನಿತ್ಯ ಸೇವಿಸುವ ಆಹಾರಕ್ಕೆ ರುಚಿ ಬಂದಿರುವುದು ಇದರಿಂದಲೇ. ಇದರ ನೀರು ಕಬ್ಬಿನ ಹಾಲಿನಷ್ಟು ಸವಿಯಾಗಿದೆ. ಪರೋಪಕಾರದ, ಪುಣ್ಯಕರವಾದ ಈ ನದಿ ಇಲ್ಲಿ ಗಂಗೆಯೊಡನೆ ಸಂಗಮವಾಗುತ್ತಿದೆ. ನೀನು ಕೇಳಿದ ಆ ಕೋಲಾಹಲದ ಧ್ವನಿ ಇವೆರಡು ನದಿಗಳ ಸಂಗಮದ ಸಂಘರ್ಷದ ಶಬ್ದ. ಮಕ್ಕಳೆ, ಈ ನದಿಗೆ ನಮಸ್ಕರಿಸಿರಿ'' ಎಂದರು. ಶಿಷ್ಯರಲ್ಲಿ ಧಾರ್ಮಿಕತೆ ಬರಲು, ಶ್ರದ್ಧೆ ಬೆಳೆಯಲು ಶಿಕ್ಷಕರಾದವರ ಚಿಂತನೆ ವಿಶ್ವಾಮಿತ್ರರಂತಿರಬೇಕು. ನದಿಯ ಸಾರ್ಥಕತೆಯ ಯಥಾರ್ಥ ವಿಚಾರಗಳನ್ನು ಹಾರ್ದಿಕವಾಗಿ ತಿಳಿಸಿದ್ದಾರೆ. ಈ ನೆಲೆಗಟ್ಟಿನಲ್ಲಿ ಮಕ್ಕಳಿಗೆ ವಿಚಾರಗಳನ್ನು ಮನವರಿಕೆ ಮಾಡಿಸಬೇಕು. ನಮ್ಮ ದೇಶದಲ್ಲಿ ನದಿಗಳು ಕೇವಲ ನೀರಲ್ಲ, ಅವು ಪುಣ್ಯಜಲದ, ಪಾಪನಾಶನದ, ಪವಿತ್ರ ಸಂಕೇತಗಳು. ಸರಯೂ ಗಾಥೆಯನ್ನು ಕೇಳಿದ ಸೋದರರಿಬ್ಬರೂ ಧಾರ್ಮಿಕ ಭಾವ, ಭಕ್ತಿಯಿಂದ ಸರಯೂ ನದಿಗೆ ನಮಿಸಿದರು. ಗಂಗೆಯ ದಕ್ಷಿಣ ತೀರ ಸೇರಿದಾಗ ಶ್ರೀರಾಮನು ''ಅಬ್ಬಾ, ಭಯಂಕರವಾದ ಜನಶೂನ್ಯ ಕಾಡಿದು. ಮುನಿಗಳೇ, ಈ ಕಾಡು ಯಾವುದು?'' ಎಂದನು.

### ತಾಟಕಿಯ ಕಥೆ

ವಿಶ್ವಾಮಿತ್ರರು, ''ರಾಮ, ಇಂದ್ರನು ವೃತ್ರಾಸುರನನ್ನು ವಧಿಸಿದಾಗ ಅವನು ಅಶುಚಿಯಾದನು. ದೇವತೆ ಹಾಗೂ ಋಷಿಗಳು ಸೇರಿ ಗಂಗೆ ಇತ್ಯಾದಿ ಪುಣ್ಯತೀರ್ಥಗಳಿಂದ ಇಂದ್ರನಿಗೆ ಅಭಿಷೇಕ

ಮಾಡಿದರು. ಆಗ ಅವನ ದೇಹದಲ್ಲಿದ್ದ 'ಅಶುಚಿ' ಎಂದರೆ 'ಮಲ' ದೂರವಾಯಿತು. 'ಹಸಿವು' ಎಂದರೆ ಕರೂಷ ತೊಲಗಿತು. ಪರಿಶುದ್ಧನಾದ ಇಂದ್ರನು ಸಂತುಷ್ಟನಾದನು. 'ಮಲದ-ಕರೂಷ ಎಂಬೆರಡು ರಾಜ್ಯಗಳಾಗಲಿ. ಅವು ಸ್ವರ್ಗದಂತೆ ಸಂಪತ್ತು, ಸಮೃದ್ಧಿಯಿಂದ ಪ್ರಖ್ಯಾತವಾಗಿರಲಿ' ಎಂದು ಹಾರೈಸಿದನು. ಕಾಲಾನಂತರ ತಾಟಕಿ ಎಂಬ ಯಕ್ಷಿಯೊಬ್ಬಳು ಅಲ್ಲಿ ಸೇರಿದಳು. ಅವಳ ಪತಿ ಸುಂದನು ತನ್ನ ಕೆಟ್ಟ ಕೆಲಸಕ್ಕಾಗಿ ಅಗಸ್ತ್ಯರ ಶಾಪದಿಂದ ಮೃತನಾದನು. ಇದರಿಂದ ಕ್ರೋಧಗೊಂಡ ತಾಟಕಿ ಮಗನೊಡನೆ ಅಗಸ್ತ್ಯರನ್ನೇ ನುಂಗಲು ನುಗ್ಗಿದಳು. ರೋಷಗೊಂಡ ಅಗಸ್ತ್ಯರು ತಾಟಕಿಗೆ, 'ನಿನ್ನ ರೂಪ ಕರಾಳವಾಗಿ, ವಿಕಾರವಾಗಿ ಭೀಕರವಾಗಲಿ. ನೀನು ರಾಕ್ಷಸಿಯಾಗು' ಎಂದು ಶಪಿಸಿದರು. ಹೀಗಾಗಿ ತಾಟಕಿ ಕ್ರೋಧದಿಂದ ಆ ಸುಂದರವಾದ ಎರಡೂ ರಾಜ್ಯಗಳನ್ನು ನಾಶ ಮಾಡಿದ್ದಾಳೆ. ಅವಳು ವಿಧ್ವಂಸಕ ಕೆಲಸವನ್ನು ಮುಂದುವರಿಸಿದ್ದಾಳೆ. ಯಾರೂ ಹೋಗಲಾಗದ ಅಲ್ಲಿಗೆ ನಾವು ಈಗ ಹೋಗಬೇಕು. ನಿನ್ನ ಬಾಹುಬಲದಿಂದ ಆ ದುಷ್ಟೆಯ ಸಂಹಾರವಾಗಬೇಕು.''

### ರಾಜಧರ್ಮ ಯಾವುದು?

''ರಾಮ, ಇವಳ ಸಂಹಾರವು ಸಕಲ ಸಮಾಜಕ್ಕೆ ಶುಭಕರ. ಹೆಂಗಸೆಂಬ ಯಾವುದೇ ಹಿಂಜರಿಕೆ ಬೇಡ. ಸಮಾಜದಲ್ಲಿನ ಎಲ್ಲರ ರಕ್ಷಣೆಯ ಕೆಲಸ ರಾಜಪುತ್ರನ ಕರ್ತವ್ಯ. ಈ ಕರ್ತವ್ಯ ಕ್ರೂರವೋ, ಅಕ್ರೂರವೋ ಎಂದು ವಿವೇಚಿಸಬೇಕಾದ್ದಿಲ್ಲ. ಜನ ಸಂರಕ್ಷಣೆಯ ಕೆಲಸ ಪಾಪವಾಗಿರಲಿ, ಪಾಪರಹಿತವಾಗಿರಲಿ, ದೋಷವಿರಲಿ, ದೋಷವಿಲ್ಲದಿರಲಿ ನೀನು ಮಾಡಲೇಬೇಕು. **'ರಾಜ್ಯಭಾರನಿಯುಕ್ತಾನಾಮೇಷ ಧರ್ಮಃ ಸನಾತನಃ'** — ರಾಜ್ಯದ ಯೋಗಕ್ಷೇಮದ ಹೊರೆ ಹೊತ್ತವರಿಗೆ ಇದುವೇ ಸನಾತನ ಧರ್ಮ. ರಾಮ, ಧರ್ಮಭ್ರಷ್ಟಳಾದ, ಅಧರ್ಮಿಯಾದ ಇವಳನ್ನು ವಧಿಸು. ನೀನೇ ಮೊದಲಿಗೆ ದುಷ್ಟ ಸ್ತ್ರೀಯನ್ನು ಕೊಲ್ಲುತ್ತಿರುವೆ ಎಂದು ಭಾವಿಸದಿರು. ಭೂದೇವಿಯನ್ನು ಕೊಲ್ಲಲು ಹೊರಟ ವಿರೋಚನನ ಮಗಳಾದ ಮಂಥರೆಯನ್ನು ದೇವೇಂದ್ರನು ಬಹಳ ಹಿಂದೆಯೇ ಸಂಹರಿಸಿದ್ದಾನೆ. ಶುಕ್ರಾಚಾರ್ಯನ ತಾಯಿ, ಭೃಗು ಋಷಿಗಳ ಪತ್ನಿ ಖ್ಯಾತಿಯನ್ನು ವಿಷ್ಣು ವಧಿಸಿದ. ರಾಮ, ಪುರುಷ ಶ್ರೇಷ್ಠರಾದ, ಪ್ರಖ್ಯಾತರಾದ ಅನೇಕ ಮಹಾತ್ಮ ರಾಜಪುತ್ರರು ಅಧರ್ಮ ನಿರತರಾದ ಅನೇಕ ಸ್ತ್ರೀಯರನ್ನು ಸಂಹರಿಸಿದ್ದಾರೆ. ರಾಜಕುಮಾರ, ಮರುಕವನ್ನು ಬದಿಗೊತ್ತಿ ನನ್ನ ಆಣತಿಯಂತೆ ಇವಳನ್ನು ಸಂಹರಿಸು'' ಎಂದರು.

ಪತಿವ್ರತೆ, ಋಷಿಪತ್ನಿಯಾದರೂ ಅಧರ್ಮಕ್ಕೆ ಬೆಂಬಲವಾದಲ್ಲಿ ವಧೆಯೇ ನ್ಯಾಯ. ಹಿಂದೆ ನಡೆದದ್ದೇ ಎಲ್ಲವೂ. ಯಾವುದು ಹೊಸತು? ಹಿಂದಿನದು ತಿಳಿಯದೆ ನಮಗೆ ನಾವೇ ಹೊಸತು ಮಾಡಿತ್ತಿರುವೆವೆಂಬ ಬಿಗುಮಾನ ನಮಗೆ. ಧರ್ಮ ಸಂರಕ್ಷಣೆಯ ಕಾರ್ಯ ಅನೂಚಾನವಾಗಿ ನಡೆದುಕೊಂಡು ಬಂದಿದೆ. ವಿಶ್ವಾಮಿತ್ರರ ಮಾತುಗಳಲ್ಲಿ 'ರಾಮ, ಧರ್ಮ ಸಂರಕ್ಷಣೆಯ ಕೆಲಸವು ಕರ್ತವ್ಯ. ಇದರಲ್ಲಿ ನಿರ್ವಾಹಕನ ಬೇಕು, ಬೇಡಗಳು ಗೌಣವಾಗುವುವು. ನಿರ್ವಹಣೆಯೇ ಗುಣವಾಗುವುದು' ಎಂಬ ಧ್ವನಿಯಿತ್ತು.

ನಾಲ್ಕಾರು ಬಾರಿ ರಾಮನಿಗೆ ಕೊಲ್ಲು ಎಂದಿದ್ದಾರೆ. ಅಧರ್ಮದ ವಿಷಯದಲ್ಲಿ ಕರುಣೆ, ದಯೆ, ಯಾವುದೂ ಸಲ್ಲದು. ಕೆಲವೊಮ್ಮೆ ನಮ್ಮ ಮನದಲ್ಲಿಯೇ ಧರ್ಮಾಧರ್ಮದ ಸ್ಪರ್ಧೆ ನಡೆಯುವುದು. ಸುಂದರ ಮನಸ್ಸು ಘೋರಾರಣ್ಯವಾಗುವುದು. ತಾಟಕಿ, ಸುಂದ, ಮಾರೀಚ ಮತ್ತು ಸುಬಾಹುಗಳೆಂಬ ರಾಕ್ಷಸ ರೂಪದ ದುರ್ವಿಚಾರ ಮೇಲೇಳುವುದು. ಆ ಸಮಯದಲ್ಲಿ ನಮ್ಮೊಳಗೇ ಇರುವ ನಮ್ಮ ವ್ಯಕ್ತಿತ್ವಕ್ಕೆ ಮೆರುಗು ನೀಡಬಲ್ಲ ವಿವೇಕ-ವಿವೇಚನೆಗಳ ಶಕ್ತಿಯ ಸದುಪಯೋಗವಾಗಬೇಕು. ಇದನ್ನು ರಾಮನಿಗೆ ಅಭ್ಯಾಸ ಮಾಡಿಸುತ್ತಿದ್ದಾರೆ. ಮಾಡಿಸುವಾಗ ಇದಾವುದನ್ನೂ ಉಲ್ಲೇಖ ಮಾಡಿಲ್ಲ. ನಿನಗೆ ಇಂತಹದನ್ನು ಕಲಿಸುತ್ತಿರುವೆನೆಂದು ಹೇಳುತ್ತಿಲ್ಲ. ತಿಳಿಸದೆಯೇ ತಿಳಿಸುವ, ಕಲಿಸದೆಯೇ ಕಲಿಸುವ ಸಂದರ್ಭ, ಸನ್ನಿವೇಶಗಳಲ್ಲಿ ಅವರನ್ನು ನಿಲ್ಲಿಸಿ, ಸಾಮರ್ಥ್ಯ ಬೆಳೆಸುತ್ತಿದ್ದ ನಮ್ಮ ಹಿರಿಯರ ಜಾಣ್ಮೆಯ ಪ್ರಾಯೋಗಿಕ, ಪ್ರತ್ಯಕ್ಷ ಚಿತ್ರವಿದು. ಇಂತಹ ಉತ್ತಮ ವಿವೇಚನಾಯುಕ್ತ ವಿಚಾರದ ಪ್ರಚೋದನೆಯೇ ವಿದ್ಯಾರ್ಥಿಗಳ ಅತ್ಯಗತ್ಯ ಮೂಲಭೂತ ಆವಶ್ಯಕತೆಯಾಗಿದೆ.

ವಿಶ್ವಾಮಿತ್ರರ ವಿಚಾರಕ್ಕೆ ಬದ್ಧನಾಗಿ ರಾಮನು ಕಾರ್ಯ ಸಿದ್ಧನಾದನು. ಗುರುವಾಣಿಯು ರಾಮನ ಉತ್ಸಾಹದ ಗರಿಗೆದರಿಸಿತು. ಕೆಲವೊಮ್ಮೆ ರಾಜ್ಯ ಸೂತ್ರ ಹಿಡಿದು, ರಾಷ್ಟ್ರ ಸಂರಕ್ಷಣೆ ಮಾಡಬೇಕಾದವರು ಹೊಣೆ ತಪ್ಪಿದಾಗ ಋಷಿಗಳು ಅದನ್ನು ನೆನಪಿಸಿ, ಸರಿಪಡಿಸಿ ರಾಜ್ಯಕರ್ತರನ್ನು ಆ ಕೆಲಸದಲ್ಲಿ ತೊಡಗಿಸಬೇಕು. ಈಗಾಗಲೇ ವಿಶ್ವಾಮಿತ್ರರು ದಶರಥನಲ್ಲಿ ಈ ಅರಿವನ್ನು ಮೂಡಿಸಿದ್ದಾರೆ. ರಾಮನಿಗೆ ಅದನ್ನೇ ಪರೋಕ್ಷವಾಗಿ ತಿಳಿಸಿದ್ದಾರೆ. ಕೈ ಮುಗಿದ ರಾಮನು ''ಭಗವನ್, ತಂದೆಯು ನಿಮ್ಮ ಮಾತನ್ನು ನಡೆಸಲು ಆದೇಶಿಸಿದ್ದಾನೆ. ಅದನ್ನು ಗೌರವಿಸುವೆ. ನಿಮ್ಮ ಆಜ್ಞೆಯನ್ನು ಮರುಮಾತಿಲ್ಲದೆ ನಡೆಸುವೆ. ಅದೂ ಗುರುಗಳೆದುರಿನ ಅಪ್ಪಣೆಯ ಉಪೇಕ್ಷೆ ಎಂದಿಗೂ ಸಲ್ಲದು. ನಾನು ಸದಾ ತಂದೆಯ ಮಾತಿಗೆ ಬದ್ಧ. ಹಿಂದೆ ಎಂದೂ ಅವನ ಮಾತನ್ನು ಮೀರಿಲ್ಲ. ಮುಂದೆಯೂ ಮೀರಲಾರೆ. ಬ್ರಹ್ಮಜ್ಞಾನಿಗಳಾದ ತಮ್ಮಿಚ್ಛೆಯಂತೆ ತಾಟಕಿಯನ್ನು ಸಂಹರಿಸುವೆ. ಸಂದೇಹ ಪಡದಿರಿ ಗುರುವರ್ಯ. ಸಮಾಜದ ಸರ್ವರಿಗೂ, ಈ ಸಮಸ್ತ ರಾಷ್ಟ್ರಕ್ಕೂ ಮಂಗಳವಾಗಲೆಂದು ನಿಮ್ಮ ನುಡಿಗಳಂತೆ ನಡೆಯಲು ಸಿದ್ಧನಾಗಿರುವೆ'' ಎಂದನು. ಹೀಗೆ ಮೊದಲಿಗೆ ರಾಮನ ಬುದ್ಧಿ-ಮನಸ್ಸುಗಳನ್ನು ಸಿದ್ಧಗೊಳಿಸಿದರು ವಿಶ್ವಾಮಿತ್ರರು.